**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಸಂಖ್ಯೆ:ಕಾಶಿಇ/ ಸುತ್ತೋಲೆ/ಆಯವ್ಯಯ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:27.09.2018

**ಸುತ್ತೋಲೆ**

ವಿಷಯ ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣದ ಮೊತ್ತವನ್ನು ಕೆ-2 ಮೂಲಕ ಕ್ಲೇಮು ಮಾಡುವ ಹಂತಗಳ ಕುರಿತು.

ಉಲ್ಲೇಖ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳು

****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ವಯೋ ನಿವೃತ್ತಿಹೊಂದಿರುವ ಅಧಿಕಾರಿ/ಸಿಬ್ಬಂದಿಗಳ ಗಳಿಕೆ ರಜೆ ನಗದೀಕರಣ ಮೊತ್ತವನ್ನು ಕೆ-2ರ ಮೂಲಕ ಡ್ರಾ ಮಾಡುವ ಕುರಿತು ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಸದರಿ ಮೊತ್ತವನ್ನು ಕೆ-2 ಮೂಲಕ ಡ್ರಾ ಮಾಡುವ ಸಂಬಂಧ ಈ ಕೆಳಕಂಡ ಹಂತಗಳನ್ನು ಅನುಸರಿಸಲು ಸೂಚಿಸಿದೆ;

Case Worker
↓
Create Bill
↓
State
↓
Bill Type - CTS-1
↓
Claim Type – Terminal leave Encashment/Death leave Encashment

ಮೇಲೆ ತಿಳಿಸಿರುವ ಹಂತಗಳ ನಂತರ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲನ್ನು ಸಿದ್ಧಪಡಿಸುವ ರೀತಿಯಲ್ಲಿ ಬಿಲ್ಲನ್ನು ಸಿದ್ಧಪಡಿಸಲು ಹಾಗೂ ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ:2071-01-115-2-02-251-V ರಡಿಯಲ್ಲಿ ಕ್ಲೇಮು ಮಾಡಲು ಸೂಚಿಸಿದ್ದು, ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸರ್ಕಾರದ ಹಂತದಲ್ಲಿ ಅನುದಾನವನ್ನು upload ಮಾಡಿದ್ದು, ಇನ್ನು ಮುಂದೆ ಅನುದಾನವನ್ನು ಕೋರಿ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸದಿರಲು ಸೂಚಿಸಿದೆ. ಬಿಲ್ಲನ್ನು ಸಿದ್ಧಪಡಿಸುವ ಸಂಬಂಧ ಯಾವುದೇ ತಾಂತ್ರಿಕ ತೊಂದರೆಯಾದಲ್ಲಿ ಕೂಡಲೇ ಕೇಂದ್ರ ಕಛೇರಿಗೆ ಮಾಹಿತಿಯನ್ನು ನೀಡಲು ಸೂಚಿಸಿದೆ.

27/9/18

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು.
3. ಲೆಕ್ಕಾಧಿಕಾರಿಗಳು/ಮ್ಯಾನೇಜರ್, ಹಣ ಮತ್ತು ಪಾವತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
4. ಮಾಹಿತಿ ಅಧಿಕಾರಿಗಳು/ಮ್ಯಾನೇಜರ್, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.

**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/11/ಅಕಾನಿಸಾ/ಉಗ್ರಾಣ/2013-14 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 27.09.2018.

## ಸುತ್ತೋಲೆ

**ವಿಷಯ:** ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ನಿರುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ:ಇಡಿ/44/ವಿವಿಧ/2018, ದಿನಾಂಕ:5.9.2018.
2. ಮಾನ್ಯ ಉನ್ನತ ಶಿಕ್ಷಣ ಸಚಿವರ ಟಿಪ್ಪಣಿ ಸಂಖ್ಯೆ:ಉಶಿಸ/ಗೃಕಮ್ಯೆ/199/2018-19, ದಿನಾಂಕ:23.7.2018.
3. ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ), ದಲಿತ ನಿರುದ್ಯೋಗಿಗಳ ಸಂಸ್ಥೆ, ಗೋಕುಲಂ, ಮೈಸೂರು ಇವರ ಮನವಿ ಪತ್ರದ ದಿನಾಂಕ:20.7.2018.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/208/ಪಬವ/2017, ದಿನಾಂಕ:11.10.2017.
5. ಸರ್ಕಾರದ ಆದೇಶ ಸಂಖ್ಯೆ:ಆಇ/03/ಟಿಎಸ್‌ಪಿ/2018, ದಿನಾಂಕ:14.5.2018.
6. ಈ ಕಛೇರಿ ಸುತ್ತೋಲೆ ಸಂಖ್ಯೆ:DCE/06/BUD/91-92, ದಿನಾಂಕ:27.1.1992.
7. ಸರ್ಕಾರದ ಆದೇಶ ಸಂಖ್ಯೆ: FD/03/TFP/1980, ದಿನಾಂಕ:29.4.81.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರಿನ ಗೋಕಲಂನ ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ), ದಲಿತ ನಿರುದ್ಯೋಗಿಗಳ ಸಂಸ್ಥೆ ಇವರು ಉಲ್ಲೇಖ(3)ರ ಪ್ರಕಾರ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಮನವಿಯನ್ನು ಸಲ್ಲಿಸಿ, ನಿರುಪಯುಕ್ತ ಸಾಮಗ್ರಿಗಳ ವಿಲೇವಾರಿ ಮಾಡುವ ಸಂಬಂಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಅನುಪಯುಕ್ತ ಸಾಮಗ್ರಿಗಳಿಗೆ ದರ ನಿಗದಿಪಡಿಸಿ ಸದರಿ ದರದ ಮೇಲೆ ಶೇಕಡಾ 26ರಷ್ಟು ಹೆಚ್ಚಿಗೆ ಪಡೆದು ಸದರಿ ಸಂಸ್ಥೆಗೆ ವಿಲೇವಾರಿ ಮಾಡುವಂತೆ ಆದೇಶ ನೀಡಿದ್ದು, ಅದರಂತೆ, ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಕಛೇರಿ/ಸಂಸ್ಥೆಗಳಲ್ಲಿ ಇರುವಂತಹ ಅನುಪಯುಕ್ತ ಸಾಮಗ್ರಿಗಳನ್ನು ಪಂಚಾಯತ್ ರಾಜ್ ಇಲಾಖೆ ನಿಗಧಿಪಡಿಸಿರುವ ದರದಲ್ಲಿ ನಮ್ಮ ಸಂಸ್ಥೆಗೆ ನೀಡುವಂತೆ ಕೋರಿರುತ್ತಾರೆ.

ಸದರಿ ಮನವಿಗೆ ಸಂಬಂಧಿಸಿದಂತೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಉಲ್ಲೇಖ (2)ರ ಟಿಪ್ಪಣಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸದರಿ ಮನವಿ ಲಗತ್ತಿಸಿ, ಸದರಿಯವರ ಮನವಿಯನ್ನು ಪರಿಗಣಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿರುವ ಹಿನ್ನೆಲೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಉಲ್ಲೇಖ(1)ರ ಪತ್ರದಲ್ಲಿ ಕೋರಿರುವ ಅಂಶಗಳನ್ನು ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಪರಿಶೀಲಿಸಲಾಗಿ, ಉಲ್ಲೇಖ(7)ರ ಸರ್ಕಾರದ ಆದೇಶದಲ್ಲಿ ಹಾಗೂ ಈ ಕಛೇರಿ ಉಲ್ಲೇಖ(6)ರ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ ಸಮಾನಾಂತರ ಹುದ್ದೆ ಎಂದು ಪರಿಗಣಿಸಿರುವ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ(5)ರ ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಲ್ಲಿ ಇಲಾಖಾ ಮುಖ್ಯಸ್ಥರು/ವಿಭಾಗ/ಜಿಲ್ಲೆ/ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪ್ರತ್ಯಾಯೋಜಿಸಿದ್ದು, ಈ ಅಧಿಕಾರದ ಹಿನ್ನೆಲೆಯಲ್ಲಿ ರಾಜ್ಯದ

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳಲ್ಲಿರುವ ನಿರುಪಯುಕ್ತ ಸಾಮಗ್ರಿಗಳನ್ನು ಪಟ್ಟಿ ಮಾಡಿ, ದುರಸ್ಥಿಪಡಿಸಿ ಉಪಯೋಗಿಸಲು ಸಾಧ್ಯವಿರುವ ಸಾಮಗ್ರಿಗಳನ್ನು ದುರಸ್ಥಿಪಡಿಸಿ ಉಪಯೋಗಿಸಲು ಹಾಗೂ ದುರಸ್ಥಿಪಡಿಸಲು ಸಾಧ್ಯವಾಗದಿದ್ದ ಸಾಮಗ್ರಿಗಳನ್ನು ಉಲ್ಲೇಖ(5), (6), (7)ರ ಆದೇಶ/ಸುತ್ತೋಲೆ ಪ್ರಕಾರ ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.

ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ತಮ್ಮ ವ್ಯಾಪ್ತಿಯ ಕಾಲೇಜುಗಳ ಪ್ರಾಂಶುಪಾಲರುಗಳು ತೆಗೆದುಕೊಂಡ ಕ್ರಮದ ಬಗ್ಗೆ ಗಮನ ಹರಿಸಿ ತಮ್ಮ ವ್ಯಾಪ್ತಿಯ ಕಾಲೇಜುಗಳ ನಿರುಪಯುಕ್ತ ಸಾಮಗ್ರಿಗಳ ವಿಲೇವಾರಿಗೆ ಕ್ರಮ ವಹಿಸಿ ಕ್ರೋಢೀಕೃತ ಮಾಹಿತಿ/ವರದಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

<u>ಇವರಿಗೆ:</u>

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ
2. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
   } -ಇಲಾಖಾ ವೆಬ್ ಸೈಟ್ ಮೂಲಕ
3. ನೋಡಲ್ ಅಧಿಕಾರಿ, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲು.

<u>ಪ್ರತಿ ರವಾನೆ-ಮಾಹಿತಿಗಾಗಿ:</u>

1. ಮಾನ್ಯ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
2. ಶ್ರೀ.ಬಿ.ಸಿ.ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ), ದಲಿತ ನಿರುದ್ಯೋಗಿಗಳ ಸಂಸ್ಥೆ, ನಂ.293, 8ನೇ ಮುಖ್ಯ ರಸ್ತೆ, 11ನೇ ಕ್ರಾಸ್, ಗೋಕುಲಂ, 3ನೇ ಹಂತ, ಮೈಸೂರು-570002.
3. ಹೆಚ್ಚಿನ ಪ್ರತಿ.
4. ಕಛೇರಿ ಪ್ರತಿ.

D:\HARINI\Stores\Circular.docx

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/167/ರೋ.ರಿ/ರಿ.ಸ್ಥಾ.ರಿ/2018-19/ನೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21.09.2018.

## ಸುತ್ತೋಲೆ

ವಿಷಯ: ರೋಸ್ಟರ್ ರಿಜಿಸ್ಟರ್ ಮತ್ತು ರಿಕ್ತ ಸ್ಥಾನಗಳ ರಿಜಿಸ್ಟರ್‌ನ್ನು ನಿರ್ವಹಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/626/ಸೇನೆನಿ/2018
ದಿನಾಂಕ:17.09.2018.

** ** **

ಇಲಾಖಾ ವ್ಯಾಪ್ತಿಗೊಳಪಡುವ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವಾಗ ಜಾರಿಯಲ್ಲಿರುವ ನೇರ ನೇಮಕಾತಿ ಮೀಸಲಾತಿಯನ್ನು ಅನುಸರಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಒದಗಿಸಿರುವ ಮೀಸಲಾತಿಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಸಂಬಂಧಪಟ್ಟ ನಮೂನೆಯಯಲ್ಲಿ ನಿಗದಿಪಡಿಸಿರುವಂತೆ ರಿಕ್ತ ಸ್ಥಾನಗಳ ರಿಜಿಸ್ಟರ್‌ನ್ನು ಕಟ್ಟುನಿಟ್ಟಾಗಿ ನಿರ್ವಹಿಸುವಂತೆ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಸಂವಿಧಾನದ ಅನುಚ್ಛೇದ 371 (ಜೆ) ಅನ್ವಯವಾಗುವ ಪ್ರಕರಣಗಳಲ್ಲಿ, ಅನುಚ್ಛೇದ 371(ಜೆ)ರನ್ವಯ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದಗಳಿಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/230/ಸೇನೆನಿ/2015, ದಿನಾಂಕ:14.08.2015 ರನ್ವಯ ಪ್ರತ್ಯೇಕವಾಗಿ ರಿಕ್ತ ಸ್ಥಾನಗಳ/ರೋಸ್ಟರ್ ರಿಜಿಸ್ಟರ್‌ನ್ನು ಸುತ್ತೋಲೆಯೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ಕಡ್ಡಾಯವಾಗಿ ನಿರ್ವಹಿಸುವಂತೆಯೂ ಸಹ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಸೂಚನೆ ನೀಡುವಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ನಿರ್ದೇಶಿಸಲಾಗಿದೆ.

ಅದರಂತೆ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯು ತಮ್ಮ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಸಂಬಂಧಿಸಿದಂತೆ ರೋಸ್ಟರ್ ರಿಜಿಸ್ಟರ್ ಮತ್ತು ವೇಕೆನ್ಸಿ ರಿಜಿಸ್ಟರ್‌ನ್ನು ಕಡ್ಡಾಯವಾಗಿ ನಿರ್ವಹಿಸಬೇಕಾಗಿರುವುದು ಅವಶ್ಯವಿರುತ್ತದೆ.

ಆದ್ದರಿಂದ ಸರ್ಕಾರದ ದಿನಾಂಕ:14.08.2015ರ ಸುತ್ತೋಲೆ ಸಂಖ್ಯೆ:ಸಿಆಸುಇ/230/ಸೇನೆನಿ/2015 ನ್ನು (ನಿಗದಿತ ನಮೂನೆಯೊಂದಿಗೆ) ಇದರೊಂದಿಗೆ ಲಗತ್ತಿಸಲಾಗಿದ್ದು, ತಮ್ಮ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಕಾನೂನು ಕಾಲೇಜುಗಳು, ಶಿಕ್ಷಣ ಮಹಾವಿದ್ಯಾಲಯಗಳು (ಬಿ.ಎಡ್ ಕಾಲೇಜುಗಳು) ಹಾಗೂ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ (ಬಿ.ಪಿ.ಎಡ್ ಕಾಲೇಜುಗಳು) ಸಂಬಂಧಿಸಿದಂತೆ ನಿಯಮಗಳನ್ವಯ ರೋಸ್ಟರ್

ರಿಜಿಸ್ಟರ್ ಮತ್ತು ವೇಕೆನ್ಸಿ ರಿಜಿಸ್ಟರ್‌ನ್ನು ಸಿದ್ಧಪಡಿಸಿ ತಪ್ಪದೇ **ದಿನಾಂಕ:10.10.2018ರೊಳಗಾಗಿ** ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಸಲ್ಲಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಈ ರೀತಿ ರಿಜಿಸ್ಟರ್‌ಗಳನ್ನು ಸಿದ್ಧಪಡಿಸುವಾಗ ಸಂಬಂಧಪಟ್ಟ ಅಗತ್ಯ ಮೂಲ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ನಿಖರ ಮಾಹಿತಿ/ವಿವರಗಳೊಂದಿಗೆ ರಿಜಿಸ್ಟರ್‌ಗಳನ್ನು ಸಿದ್ಧಪಡಿಸುವುದು. ಒಂದು ವೇಳೆ ನಿಯಮಗಳನ್ವಯ ಪರಿಶೀಲಿಸದೇ ಸಂಬಂಧಪಟ್ಟ ರಿಜಿಸ್ಟರ್‌ಗಳನ್ನು ತಪ್ಪು ಅಥವಾ ವ್ಯತ್ಯಾಸದ ಮಾಹಿತಿ/ವಿವರಗಳೊಂದಿಗೆ ಸಿದ್ಧಪಡಿಸಿ ಇಲಾಖೆಗೆ ಸಲ್ಲಿಸಿದಲ್ಲಿ ಹಾಗೂ ಇದರಿಂದ ಮುಂದೆ ಏನಾದರೂ ಅಸಂಗತತೆ ಉದ್ಭವಿಸಿದಲ್ಲಿ ಇದಕ್ಕೆ ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯೇ ನೇರ ಹೊಣೆಗಾರಿಕೆಯಾಗಿರುತ್ತದೆ.

**ಕಾಲೇಜು ಶಿಕ್ಷಣ ಆಯುಕ್ತರು**

**ಇವರಿಗೆ:**

(1) ಇಲಾಖಾ ವ್ಯಾಪ್ತಿಗೊಳಪಡುವ ಎಲ್ಲಾ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಕಾನೂನು ಕಾಲೇಜುಗಳು, ಬಿ.ಎಡ್ ಕಾಲೇಜುಗಳು ಹಾಗೂ ಬಿ.ಪಿ.ಎಡ್ ಕಾಲೇಜುಗಳ ಆಡಳಿತ ಮಂಡಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
(2) ಇಲಾಖಾ ವ್ಯಾಪ್ತಿಗೊಳಪಡುವ ಎಲ್ಲಾ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಕಾನೂನು ಕಾಲೇಜುಗಳು, ಬಿ.ಎಡ್ ಕಾಲೇಜುಗಳು ಹಾಗೂ ಬಿ.ಪಿ.ಎಡ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ, ಮಂಗಳೂರು ಮತ್ತು ಕಲಬುರಗಿ–ಮಾಹಿತಿಗಾಗಿ ಹಾಗೂ ಸಂಬಂಧಪಟ್ಟ ಆಡಳಿತ ಮಂಡಳಿಗಳು ತಮ್ಮ ಕಛೇರಿಗೆ ಸಲ್ಲಿಸುವ ರಿಜಿಸ್ಟರ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮಾಹಿತಿ/ವಿವರಗಳು ನಿಯಮಾನುಸಾರವಾಗಿದ್ದಲ್ಲಿ ತಮ್ಮ ಅಭಿಪ್ರಾಯದೊಂದಿಗೆ ತಪ್ಪದೇ **ದಿನಾಂಕ:20.10.2018ರೊಳಗಾಗಿ (excel format** ನಲ್ಲಿ –**ಹಾರ್ಡ್** ಮತ್ತು **ಸಾಫ್ಟ್ ಕಾಪಿಗಳಲ್ಲಿ–email** ID-dcenemakati@gmail.com) ಈ ಕಛೇರಿಗೆ ದ್ವಿಪ್ರತಿಯಲ್ಲಿ ವರದಿ ನೀಡುವುದು. ಒಂದು ವೇಳೆ ಸಂಬಂಧಪಟ್ಟ ಮಾಹಿತಿ/ವಿವರಗಳು ನಿಯಮಾನುಸಾರವಾಗಿಲ್ಲದಿದ್ದಲ್ಲಿ ತಮ್ಮ ಕಛೇರಿ ಹಂತದಲ್ಲೇ ಹಿಂದಿರುಗಿಸಿ ಆಡಳಿತ ಮಂಡಳಿಗೆ ಸೂಕ್ತ ನಿರ್ದೇಶನ ನೀಡುವುದು.
2) ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು–ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ.
3) ಅಧೀಕ್ಷಕರು, ನೇಮಕಾತಿ ವಿಭಾಗ–2 (ಬೆಂಗಳೂರು ನಗರ, ಮೈಸೂರು ಮತ್ತು ಮಂಗಳೂರು ವಿಭಾಗ)–ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4) ಅಧೀಕ್ಷಕರು, ನೇಮಕಾತಿ ವಿಭಾಗ–2 (ಬೆಂಗಳೂರು ಗ್ರಾಮಾಂತರ ಮತ್ತು ಧಾರವಾಡ ವಿಭಾಗ)– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
5) ಅಧೀಕ್ಷಕರು, ನೇಮಕಾತಿ ವಿಭಾಗ–2 (ಕಲಬುರಗಿ ಮತ್ತು ಶಿವಮೊಗ್ಗ ವಿಭಾಗ)– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
6) ಹೆಚ್ಚುವರಿ ಪ್ರತಿ.
7) ಕಛೇರಿ ಪ್ರತಿ.

## VACANCY REGISTER

Designation of Appointing Authority

Percentage of vacancies required to be filled by

Direct Recruitment/ Promotion/Deputation

| Sl. No. | Date of Occurance | Whether required to be filled by Direct Recruitment/ Promotion/ Deputation | Classification of DR vacancy (SC/ST/BCM/ BCT/BT/BSG/UR) | Date of Notifying vacancy to selecting Authority | Classification of PR Vacancy (SC/ST/UR) | Date of filling up | Whether filled by Direct Recruitment/ Promotion/ Deputation | Whether Candidate appointed is SC/ST/BCM/BCT/ BT/BSG/GM | Reasons for deviation, if any from the classification |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

Sd/-
President/Secretary

**ಕಛೇರಿಯ ಹೆಸರು**

**ಇಲಾಖೆ**

| | |
|---|---|
| ಇಲಾಖೆ | |
| ಕಛೇರಿಯ ಹೆಸರು | |
| ಹುದ್ದೆ | |
| ವೃಂದ | |
| ವೇತನ ಶ್ರೇಣಿ | |
| ಮಂಜೂರಾದ ವೃಂದ ಬಲ | |
| ಮುಂಬಡ್ತಿಗೆ | |
| ನೇಮಕಾತಿ ಪ್ರಾಧಿಕಾರ | |

ರಿಕ್ತ ಸ್ಥಾನಗಳ/ರೋಸ್ಟರ್ ರಿಜಿಸ್ಟರ್

| ಕ್ರಮ ಸಂಖ್ಯೆ | ಆಯ್ಕೆ ಪ್ರಾಧಿಕಾರದ ಹೆಸರು | ಆಯ್ಕೆ ಪ್ರಾಧಿಕಾರಕ್ಕೆ ಹುದ್ದೆಯ ಬಗ್ಗೆ ವರದಿ ನೀಡಿದ ದಿನಾಂಕ | ಒಟ್ಟು ಖಾಲಿ ಹುದ್ದೆಗಳು | ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ | ನೇಮಕಾತಿ ಅಧಿಸೂಚನೆ/ ಆದೇಶ ಸಂಖ್ಯೆ | ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ | ಕ್ರಮ ಸಂಖ್ಯೆ | ಆವೃತ್ತಿ ಸಂಖ್ಯೆ | ರೋಸ್ಟರ್ ಬಿಂದು | ನೇರ ಮೀಸಲಾತಿ | ಸಮತಳ ಮೀಸಲಾತಿ | ಅಧಿಕಾರಿಯ ಹೆಸರು | ಕೆಪಿಎಸ್‌ಸಿ ಆಯ್ಕೆಯ ಕ್ರಮ ಸಂಖ್ಯೆ | | ಸಾಮಾನ್ಯ ಅಥವಾ | ಮೀಸಲಾತಿ ಯನ್ನು ನೀಡದಿರಲು ಕಾರಣ | ಷರಾ |
|---|---|---|---|---|---|---|---|---|---|---|---|---|---|---|---|---|---|
| | | | | ಸಂಖ್ಯೆ/ ದಿನಾಂಕ | ಸಂಖ್ಯೆ/ ದಿನಾಂಕ | | | | | ಸಾಮಾನ್ಯ/ ಎಸ್‌ಸಿ/ ಎಸ್‌ಟಿ/ ಪ್ರವರ್ಗ-I/ ಪ್ರವರ್ಗ-IIA/ ಪ್ರವರ್ಗ-IIB/ ಪ್ರವರ್ಗ-IIIA/ ಪ್ರವರ್ಗ-IIIB | ಇತರೆ/ ಮಹಿಳೆ/ ಅಂಗವಿಕಲ/ ಮಾಜಿ ಸೈನಿಕ/ ಕನ್ನಡ ಮಾಧ್ಯಮ/ ಗ್ರಾಮೀಣ ಅಭ್ಯರ್ಥಿ/ ಯೋಜನಾ ನಿರಾಶ್ರಿತರು | | | ಸಾಮಾನ್ಯ/ ಎಸ್‌ಸಿ/ ಎಸ್‌ಟಿ/ ಪ್ರವರ್ಗ-I/ ಪ್ರವರ್ಗ-IIA/ ಪ್ರವರ್ಗ-IIB/ ಪ್ರವರ್ಗ-IIIA/ ಪ್ರವರ್ಗ-IIIB | ಎಸ್‌ಸಿ/ ಎಸ್‌ಟಿ/ ಪ್ರವರ್ಗ-I/ ಪ್ರವರ್ಗ-IIA/ ಪ್ರವರ್ಗ-IIB/ ಪ್ರವರ್ಗ-IIIA/ ಪ್ರವರ್ಗ-IIIB ಗಳಿಂದ ಭರ್ತಿ ಮಾಡಲಾಗಿದೆಯೇ? | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |

ಸಹಿ/-

ಅಧ್ಯಕ್ಷರು/ಕಾರ್ಯದರ್ಶಿಗಳು

**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ವಿಯೋ/31/Placement Cell/2014-15

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:25-09-2018.

## ಸುತ್ತೋಲೆ

IBPS ಸಂಸ್ಥೆಯವರು ಪದವಿ ಹೊಂದಿದ ವಿದ್ಯಾರ್ಥಿಗಳಿಂದ ಹಲವು ಬ್ಯಾಂಕ್‌ಗಳಲ್ಲಿನ Clerical Cadre ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ವಿದ್ಯಾರ್ಹತೆ : ಪದವಿ ಹಾಗೂ ಕಂಪ್ಯೂಟರ್ ಸಾಕ್ಷರತೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 10-10-2018

Online Preliminary ಪರೀಕ್ಷೆ : 08-12-2018, 09-12-2018 ಹಾಗೂ 15-12-2018, 16-12-2018

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : www.ibps.in

Preliminary ಪರೀಕ್ಷೆಯ ಕರ್ನಾಟಕದ ಕೇಂದ್ರಗಳ ವಿವರ: ಬೆಂಗಳೂರು, ಬೆಳಗಾವಿ, ಬೀದರ್, ದಾವಣಗೆರೆ, ಧಾರವಾಡ, ಕಲಬುರ್ಗಿ, ಹಾಸನ, ಹುಬ್ಬಳ್ಳಿ, ಮಂಡ್ಯ, ಮಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಉಡುಪಿ

Preliminary ಪರೀಕ್ಷೆಯ ವಿವರ:

| ಕ್ರ. ಸಂ. | ವಿಷಯ | ಪ್ರಶ್ನೆಗಳು | ಅಂಕಗಳು | ಅವಧಿ |
|---|---|---|---|---|
| 1 | English Language | 30 | 30 | 20 ನಿಮಿಷ |
| 2 | Numerical Ability | 35 | 35 | 20 ನಿಮಿಷ |
| 3 | Reasoning Ability | 35 | 35 | 20 ನಿಮಿಷ |
| | **Total** | 100 | 100 | 60 ನಿಮಿಷ |

Main ಪರೀಕ್ಷೆಯ ವಿವರ:

| ಕ್ರ. ಸಂ. | ವಿಷಯ | ಪ್ರಶ್ನೆಗಳು | ಅಂಕಗಳು | ಅವಧಿ |
|---|---|---|---|---|
| 1 | General/ Financial Awareness | 50 | 50 | 35 ನಿಮಿಷ |
| 2 | General English | 40 | 40 | 35 ನಿಮಿಷ |
| 3 | Reasoning Ability & Competitive Aptitude | 50 | 60 | 45 ನಿಮಿಷ |
| 4 | Quantitative Aptitude | 50 | 50 | 45 ನಿಮಿಷ |
| | **Total** | 190 | 200 | 160 ನಿಮಿಷ |

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪೂರ್ವ ವಿದ್ಯಾರ್ಥಿಗಳ ಗಮನಕ್ಕೆ ತರಲು ಹಾಗೂ ವಿಶೇಷವಾಗಿ ಸ್ನಾತಕೋತ್ತರ ಕೇಂದ್ರಗಳ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಹಾಕಲು ಪ್ರೋತ್ಸಾಹಿಸಲು ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷ ತರಗತಿಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು.

**ಇವರಿಗೆ:**

1) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಪ್ರವರ್ತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.
3) ಸಂಬಂಧಪಟ್ಟ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ Placement Cell ನ ಸಂಚಾಲಕರು – ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಕಲಬುರ್ಗಿ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಶಿಇ, ಬೆಂಗಳೂರು – ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು.
3) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22297760, 22297824.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ:ಕಾಶಿಇ:ಶೈವಿ:48:ಸ್ಕೌಟ್ಸ್ & ಗೈಡ್ಸ್:2018-19

ದಿನಾಂಕ:26.09.2018

## ಅಧಿಕೃತ ಜ್ಞಾಪನ

ವಿಷಯ: ವಿಭಾಗೀಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರಕ್ಕೆ ರೋವರ್ಸ್ ಮತ್ತು ರೇಂಜರ್ಸ್‌ಗಳನ್ನು ನಿಯೋಜನೆ ಮಾಡುವ ಬಗ್ಗೆ.

ಉಲ್ಲೇಖ: ರಾಜ್ಯ ಜಂಟಿ ಕಾರ್ಯದರ್ಶಿಗಳು (ಸ್ಕೌ), ಭಾರತ್ ಸ್ಕೌಟ್ಸ್ ಮತ್ತ ಗೈಡ್ಸ್, ಕರ್ನಾಟಕ, ರವರ ಪತ್ರ ಸಂಖ್ಯೆ:BSG/SHQ/1649/2018-19 dt:22.09.2018.

******

ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ವಿಭಾಗೀಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರವನ್ನು ದಿನಾಂಕ:28 ಸೆಪ್ಟೆಂಬರ್ ರಿಂದ 02 ಅಕ್ಟೋಬರ್ 2018 ರವರೆಗೆ ದೇವಗಿರಿ ಕ್ಯಾಂಪ್, ಸಂಡೂರು ತಾ. ಬಳ್ಳಾರಿ ಜಿಲ್ಲೆ, ಇಲ್ಲಿ ಆಯೋಜಿಸಲಾಗಿದ್ದು, ಸದರಿ ತರಬೇತಿಗೆ ರೋವರ್ಸ್ ಮತ್ತು ರೇಂಜರ್ಸ್‌ಗಳ ಜೊತೆಗೆ ಅಧ್ಯಾಪಕರುಗಳನ್ನು ನಿಯೋಜಿಸುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ, ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರದಲ್ಲಿ ಭಾಗವಹಿಸಲು ಇದರೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿನ ರೋವರ್ಸ್ ಮತ್ತು ರೇಂಜರ್ಸ್‌ಗಳ ಜೊತೆಗೆ ಉಪನ್ಯಾಸಕರುಗಳಿಗೆ ತರಬೇತಿಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿದೆ ಹಾಗೂ ತರಬೇತಿಯಲ್ಲಿ ಭಾಗವಹಿಸಿದ ಬಗ್ಗೆ ಹಾಜರಾತಿ ಪ್ರಮಾಣ ಪತ್ರವನ್ನು ಒಪ್ಪಿಸುವ ನಿಬಂಧನೆಗೊಳಪಟ್ಟು ಪ್ರಯಾಣ ದಿನಗಳೂ ಸೇರಿದಂತೆ ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ.

26/9/18

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ: -

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ನಿಯೋಜಿತ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ಸೂಚಿಸಿ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ
2. ಸಂಬಂಧಿಸಿದ ಕಾಲೇಜುಗಳ ಅಧ್ಯಾಪಕರುಗಳಿಗೆ ( ಪ್ರಾಂಶುಪಾಲರ ಮುಖಾಂತರ).

ಪ್ರತಿಯನ್ನು:

1. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
2. ಶ್ರೀ ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
4. ಕಛೇರಿ ಪ್ರತಿ.

# THE BHARAT SCOUTS & GUIDES, KARNATAKA

List of Colleges in connection with Nature Study Camp from
28th Sept. to 2nd Oct Sep. 2018 at Sandur Taluk, Ballari District

| Raichur District | Rover | Ranger |
|---|---|---|
| Government First Grade College, Sindhanuru | 6 | 6 |
| Government First Grade College, Lingasuru | 8 | |
| L.V.D. College, Raichur | 6 | 12 |
| Loyalla College, Manvi | | 6 |
| Bidar District | | |
| Government First Grade College, Humsabad | 8 | 8 |
| Government First Grade College, Basava Kalyan | 8 | 8 |
| Kalburgi District | | |
| Government Women College, Jewargi Road, Kalburgi | | 8 |
| Government First Grade College, Kalburgi | 8 | 8 |
| Government First Grade College, Kamalapur | 8 | 8 |
| Government First Degree College, Kalagi | 8 | 8 |
| Gadag District | | |
| KLE First Grade College, Gadag | 8 | 8 |
| Ballari District | | |
| Government First Grade Commerce College, Ballari | 10 | 10 |
| Government First Grade College, H.B.Halli | 10 | 10 |
| Government First Grade College, Siruguppa | 10 | 10 |
| Government First Grade College, Hospet | 10 | 10 |
| SSA Government First Grade College, Ballari | 10 | 10 |
| Government First Grade College, Sandur | 10 | 10 |
| Koppal District | | |
| Kollanageshwarao GFG College, Gangavathi | 10 | 10 |
| Government First Grade College, Koppal | 10 | 10 |
| Ballari District | Staff | |
| Narappa, Rover Scout Leader, 2 Indel Adarsh Vidyalay College | 1 | |
| Siddesh, Rover Scout Leader, Govt. First Grade College, Sandur | 1 | |
| Muthegowda, RSL, Govt. First Grade College, Ballari | 1 | |
| | | |

# ಭಾರತ್ ಸ್ಕೌಟ್ಸ್ ಮತ್ತುಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047
ಮಿಂಚಂಚೆ: shq@bsgkarnataka.org / shantigruha@bsgkarnataka.orgಅಂತರ್ಜಾಲ: www.bsgkarnataka.org

ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ 1649 /2018–19 ದಿನಾಂಕ: 22.09.2018

ಕಾಲೇಜು ಶಿಕ್ಷಣ ಆಯುಕ್ತರ ಆಪ್ತ ಶಾಖೆ
ಸಂಖ್ಯೆ.........
ದಿನಾಂಕ 25 SEP 2018

ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು.

ಮಾನ್ಯರೆ,

ವಿಷಯ: **ರೋವರ್ಸ್ /ರೇಂಜರ್ಸ್‌ಗಳಿಗೆ ವಿಭಾಗೀಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರ**

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರೋವರ್ಸ್ /ರೇಂಜರ್ಸ್‌ಗಳಿಗೆ ವಿಭಾಗೀಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರವನ್ನು ದಿನಾಂಕ 28 ಸೆಪ್ಟೆಂಬರ್‌ರಿಂದ 02 ಅಕ್ಟೋಬರ್ 2018ರ ವರೆಗೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ದೇವಗಿರಿ ಕ್ಯಾಂಪ್, ಬಳ್ಳಾರಿ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| | |
|---|---|
| ಶಿಬಿರ | ರೋವರ್ಸ್ /ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರ |
| ದಿನಾಂಕ | ದಿನಾಂಕ 28 ಸೆಪ್ಟೆಂಬರ್‌ರಿಂದ 02 ಅಕ್ಟೋಬರ್ 2018 |
| ಸ್ಥಳ | ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ದೇವಗಿರಿ ಕ್ಯಾಂಪ್, ಬಳ್ಳಾರಿ ಜಿಲ್ಲೆ |
| ಹಾಜರಾಗುವ ವೇಳೆ ಮತ್ತು ದಿನಾಂಕ | ದಿನಾಂಕ: 28.09.2018 ಬೆಳಗ್ಗೆ 9.00 ಗಂಟೆಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು. **(ಶಿಬಿರಕ್ಕೆ ತಡವಾಗಿ ಬರುವಂತಿಲ್ಲ.)** |
| ಬಿಡುಗಡೆ ಮಾಡುವ ದಿನಾಂಕ | ದಿನಾಂಕ 02.10.2018 ಮಧ್ಯಾಹ್ನ ಊಟದ ನಂತರ ಬಿಡುಗಡೆ |
| ತರಬೇಕಾದ ಸಾಮಾಗ್ರಿಗಳು | ಚಾರಣಕ್ಕೆಅವಶ್ಯಕವಿರುವಉಡುಪು ಮತ್ತು ಸಲಕರಣೆಗಳು. ಸಮವಸ್ತ್ರ, ಬದಲಿ ಉಡುಪು, ತಟ್ಟೆ, ಲೋಟ, ಹಗುರ ಹಾಗೂ ಬೆಚ್ಚನೆ ಹಾಸಿಗೆ, ನೂಲಿನ ಹಗ್ಗ, ಬರವಣಿಗೆ ಸಾಮಾಗ್ರಿಗಳು, ವೈಯಕ್ತಿಕ ವಸ್ತುಗಳು, ನೋಟ್ ಪುಸ್ತಕ, ಶಿಬಿರಾಗ್ನಿಉಡುಪು, |
| ಶಿಬಿರದ ವಿಶೇಷತೆ | ಔಷಧಿ ಸಸ್ಯೋದ್ಯಾನ ಯಶವಂತಪುರ, ಕೆಂಚಮ್ಮನ ಕೊಳ್ಳ, ನವಿಲು ಸ್ವಾಮಿ ದೇವಸ್ಥಾನ, ಕುಮಾರಸ್ವಾಮಿ ದೇವಸ್ಥಾನ, ಆರ್.ಎಂ.ಕೆ. ಮೈನ್ಸ್ |
| ನಿಮ್ಮಜಿಲ್ಲೆಗೆ ನಿಗಧಿಪಡಿಸಿರುವ | ಪ್ರತಿ ಜಿಲ್ಲೆಯಿಂದ ನಿಪುಣ್ ತರಬೇತಿ ಹೊಂದಿದ 20ರೋವರ್ಸ್ ಮತ್ತು 20 ರೇಂಜರ್ಸ್‌ಗಳನ್ನ ನಿಯೋಜಿಸಲು ತಿಳಿಸಿದೆ |
| ಭಾಗವಹಿಸುವ ಜಿಲ್ಲೆಗಳು | ಬಳ್ಳಾರಿ, ರಾಯಚೂರು, ಕೊಪ್ಪಳ, ಕಲ್ಬುರ್ಗಿ, ಗದಗ, ಬೀದರ, ವಿಜಯಪುರ, ದಾವಣಗೆರೆ |
| ಪ್ರಯಾಣ ವೆಚ್ಚ | ಆಯಾ ಕಾಲೇಜಿನ ರೋವರ್ಸ್–ರೇಂಜರ್ಸ್ ನಿಧಿಯಿಂದ ಭರಿಸುವುದು |
| ನೋಂದಣಿ ಶುಲ್ಕ | ತಲಾರೂ 25/– |
| ಊಟ ಮತ್ತು ವಸತಿ ವ್ಯವಸ್ಥೆ | ರಾಜ್ಯ ಹಾಗೂ ಬಳ್ಳಾರಿ ಜಿಲ್ಲಾ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ |

...2

ಸದರಿ ಶಿಬಿರಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ರೋವರ್ಸ್/ರೇಂಜರ್ಸ್‌ಗಳನ್ನು ಹಾಜರಾತಿ ನೀಡಿ ನಿಯೋಜಿಸಿ ಹಾಗೂ ಅಧ್ಯಾಪಕರಿಗೆ ಸದರಿ ದಿನಗಳನ್ನು ಅನ್ಯಕಾರ್ಯನಿಮಿತ್ತ ಎಂದು ಪರಿಗಣಿಸಿ ಆದೇಶಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

for ರಾಜ್ಯ ಕಾರ್ಯದರ್ಶಿ